0141/0

ಐದು ವರ್ಷಗಳ ಬಿ.ಎ., ಎಲ್‌ಎಲ್.ಬಿ. (ಆನರ್ಸ್)/ಬಿ.ಬಿ.ಎ., ಎಲ್‌ಎಲ್.ಬಿ. (ಆನರ್ಸ್)
ಮೊದಲ ಸೆಮಿಸ್ಟರ್ ಪರೀಕ್ಷೆ, ಜೂನ್ 2013
**KANNADA**

ಸಮಯ : $2^1/_2$ ಗಂಟೆಗಳು ಗರಿಷ್ಠ ಅಂಕಗಳು : 70

ಸೂಚನೆಗಳು :
1. **ಭಾಷೆ** ಮತ್ತು **ಬರಹದ** ಶುದ್ಧಿಗೆ ಗಮನ ಕೊಡಲಾಗುವುದು.
2. **ಐದು** ಪ್ರಶ್ನೆಗಳಿಗೆ ಉತ್ತರಿಸಿರಿ.
3. **ಪ್ರತಿ** ಘಟಕದಲ್ಲಿ ನಿರ್ದಿಷ್ಟ ಪಡಿಸಿದ ಪ್ರಶ್ನೆಗಳನ್ನು **ಕಡ್ಡಾಯವಾಗಿ** ಉತ್ತರಿಸಿರಿ.
4. ಪ್ರಶ್ನೆ ಪತ್ರಿಕೆಯ **ಬಲಕ್ಕೆ** ಅಂಕಗಳನ್ನು ನಮೂದಿಸಲಾಗಿದೆ.

**ಘಟಕ – I**

ಪ್ರಶ್ನೆ 1. (ಅ) ಭಾಷೆಯ ಅಗತ್ಯಗಳು ಹಾಗೂ ಪ್ರಯೋಜನಗಳನ್ನು ಕುರಿತು ಬರೆಯಿರಿ. ಅಂಕಗಳು : 1×9=9

**ಅಥವಾ**

ಭಾಷೆ ಎಂದರೇನು ? ವಿವಿಧ ವಿದ್ವಾಂಸರ ಹೇಳಿಕೆಗಳ ಹಿನ್ನೆಲೆಯಲ್ಲಿ ವಿವೇಚಿಸಿರಿ.

(ಬ) ಕೆಳಗಿನವುಗಳಲ್ಲಿ ಬೇಕಾದ **ಒಂದಕ್ಕೆ** ಟಿಪ್ಪಣಿ ಬರೆಯಿರಿ : ಅಂಕಗಳು : 1×5=5

1) ಕನ್ನಡ ಭಾಷೆ
2) ಅನ್ಯದೇಸಿಯ ಪದಗಳು.

**ಘಟಕ – II**

ಪ್ರಶ್ನೆ 2. (ಅ) ವಾಕ್ಯದ ವಿವಿಧ ಅಂಗಗಳಾವುವು ? ಉದಾಹರಣೆಗಳೊಂದಿಗೆ ವಿವರಿಸಿರಿ. ಅಂಕಗಳು : 1×9=9

**ಅಥವಾ**

ಪತ್ರದ ವಿವಿಧ ಅಂಗಗಳು ಯಾವುವು ? ಮಾದರಿ ಪತ್ರ ಸಮೇತ ಬರೆಯಿರಿ.

(ಬ) ಕೆಳಗಿನ ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : ಅಂಕಗಳು : 1×5=5

1) ಶಬ್ದಕೋಶದ ರಚನೆಯ ಬಗೆಗೆ ವಿವರಿಸಿರಿ.

**ಅಥವಾ**

P.T.O.

StudentBounty.com
www.StudentBounty.com

2) ಕೆಳಗಿನ ಕಾನೂನು ಪಾರಿಭಾಷಿಕ ಪದಗಳ; ಕನ್ನಡ ಸಂವಾದಿ ಪದಗಳನ್ನು ಬರೆಯಿರಿ.

1) Abettor
2) Cavet
3) Injunction
4) Locus stand
5) Status quo.

**ಘಟಕ – III**

ಪ್ರಶ್ನೆ 3. (ಅ) ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡಗಳನ್ನು ಕುರಿತು ಬರೆಯಿರಿ. ಅಂಕಗಳು : 1×9=9

**ಅಥವಾ**

ಸಭೆಯ ನಡಾವಳಿಗಳನ್ನು ಕುರಿತು ವಿವರಿಸಿರಿ.

(ಬ) ಕೆಳಗಿನ ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ: ಅಂಕಗಳು : 1×5=5

1) ಜ್ಞಾಪನಾ ಪತ್ರವೆಂದರೇನು ? ಮಾದರಿ ಸಮೇತ ಬರೆಯಿರಿ.

**ಅಥವಾ**

2) ಅರೆಸರಕಾರಿ ಪತ್ರವೆಂದರೇನು ? ಮಾದರಿಯೊಂದಿಗೆ ವಿವರಿಸಿರಿ.

**ಘಟಕ – IV**

ಪ್ರಶ್ನೆ 4. (ಅ) ದಾಸ ಸಾಹಿತ್ಯದಲ್ಲಿ ಮೂಡಿ ಬಂದಿರುವ ಕಾನೂನಿನ ಅಂಶಗಳನ್ನು ವಿವೇಚಿಸಿರಿ. ಅಂಕಗಳು : 1×9=9

**ಅಥವಾ**

ಸರ್ವಜ್ಞನ ವಚನಗಳು ರೋಗಗ್ರಸ್ಥ ಸಮಾಜಕ್ಕೆ ಚುಚ್ಚು ಮದ್ದುಗಳಂತಿವೆ ಚರ್ಚಿಸಿರಿ.

(ಬ) ಕೆಳಗಿನ ವಚನಗಳಲ್ಲಿ **ಒಂದರ** ಅರ್ಥ ವಿವರಿಸಿ ಬರೆಯಿರಿ: ಅಂಕಗಳು : 1×5=5

''ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯ ಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರು ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ !''

**ಅಥವಾ**

StudentBounty.com
www.StudentBounty.com

StudentBounty.com

''ಹಸಿವಾದರೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆ ಹಳ್ಳಬಾವಿಗಳುಂಟು
ಶಯನಕ್ಕೆ ಹಾಳು ದೇಗುಲಗಳುಂಟು
ಚನ್ನಮಲ್ಲಿಕಾರ್ಜುನಯ್ಯಾ, ಆತ್ಮಸಂಗಾತಕ್ಕೆ ನೀನೆನಗುಂಟು.''

**ಘಟಕ – V**

ಪ್ರಶ್ನೆ 5. (ಅ) ಸ್ವರ ಮತ್ತು ವ್ಯಂಜನಗಳೆಂದರೇನು ? ಅವುಗಳ ವಿವರ ನೀಡಿರಿ. ಅಂಕಗಳು : 1×9=9

**ಅಥವಾ**

ಕಛೇರಿ ಆಡಳಿತದ ಕನ್ನಡ ಪದಗಳ ಪರಿಚಯ ಮಾಡಿಕೊಡಿರಿ.

(ಬ) ಕೆಳಗಿನ ಪ್ರಶ್ನೆಗಳಿಗೆ **ಒಂದೇ** ವಾಕ್ಯದಲ್ಲಿ ಉತ್ತರಿಸಿರಿ : ಅಂಕಗಳು : 1×5=5

1) ಬಸವಣ್ಣನವರ ಅಂಕಿತನಾಮ ಯಾವುದು ?
2) ಪಂಪ – ಪೊನ್ನ – ರನ್ನರನ್ನು ಏನೆಂದು ಕರೆಯುತ್ತಾರೆ ?
3) 'ಕಾಗಿನೆಲೆಯಾದಿಕೇಶವ' ಇದು ಯಾರ ಅಂಕಿತನಾಮವಾಗಿದೆ ?
4) ಅಕ್ಷರವೆಂದರೇನು ?
5) ಪುರಂದರದಾಸರ ಪೂರ್ವಾಶ್ರಮದ ಹೆಸರೇನು ?

www.StudentBounty.com